ಸಂಪ್ರದಾಯದ ಗೋಡೆಯನ್ನು ಕೆಡವಿ ಹಾಕಿದ ಮಲಯಾಳಂನ ಕಮಲಾದಾಸ್ ಮೊದಲು ಮಾಧವಿ ಕುಟ್ಟಿ ಎಂಬ ಹೆಸರಿನಲ್ಲಿ ಬರವಣಿಗೆ ಆರಂಭಿಸಿದರು. ಅವರ ಬರಹಗಳು ಹೇಗೆ ಪ್ರಖರವೋ, ಬದುಕೂ ಅಷ್ಟೇ ಪ್ರಖರತೆಯಿಂದ ಕೂಡಿತ್ತು. ಆದ್ದರಿಂದ ಟೀಕೆಯನ್ನೂ ಜನಪ್ರಿಯತೆಯನ್ನೂ ಏಕಕಾಲಕ್ಕೆ ಅವರು ಭರಿಸುವುದು ಸಾಧ್ಯವಾಯಿತು. 1984ರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದರು. 1999ರ ವೇಳೆಗೆ ಸುರಯ್ಯಾ ಆಗಿ ಮತಾಂತರಗೊಂಡರು. ಬರವಣಿಗೆಯು ಅವರಿಗೆ ಉಸಿರಿನಷ್ಟು ಪ್ರಿಯವಾದ ಮತ್ತು ಅನಿವಾರ್ಯ ಸಂಗತಿಯಾಗಿತ್ತು. 11 ಕಾದಂಬರಿ, ಮೂರು ನಾಟಕ, ಎರಡು ಆತ್ಮಕತೆ ಸೇರಿದಂತೆ ಅವರ ಅನೇಕ ಕೃತಿಗಳು ಪ್ರಕಟವಾಗಿವೆ. ಪ್ರಶಸ್ತಿಗಳು ಅವರ ಮುಡಿಗೇರಿವೆ. ಅವರ ಕೃತಿಗಳು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕಗಳಾಗಿವೆ.

ಊಟಿಯತ್ತ ಹೋಗ್ತಿದ್ವಿ. ದಾರಿಯಲ್ಲಿ ಅರ್ಧಗಂಟೆ ಕಾಲ ಮಗುವಿನೊಂದಿಗೆ ಕಳೆಯೋಣಾಂತ ಅಂದುಕೊಂಡ್ವಿ' ಮೇನೋನ್ ಆಗಾಗ ಗಂಟಲು ಅಲುಗಾಡಿಸುತ್ತ ಹೇಳಿದ.

'ಊಟಿಗೆ ಮಧುಚಂದ್ರಕ್ಕೆ ಹೋಗ್ತಾ ಇರಬೇಕು...' ಮದರ್ ಹೇಳಿದರು.

ಒಬ್ಬ ಕ್ರೈಸ್ತ ಮಠಾಧಿಪತಿ ಬಾಯಿಯಿಂದ 'ಮಧುಚಂದ್ರ' ಎಂಬ ಮಾತು ಉದುರುತ್ತದೆಯೆಂದು ದಂಪತಿ ನಿರೀಕ್ಷಿಸಿರಲಿಲ್ಲ. ಮೇನೋನ್ ಪೆಚ್ಚುಮೊರೆ ಹಾಕಿ ಮಂದಹಾಸ ಚೆಲ್ಲಿದ.

'ಈ ವಯಸ್ಸಿನಲ್ಲಿ ಏನು ಮಧುಚಂದ್ರ ಮದರ್? ನನಗೀಗ ವಯಸ್ಸು 46 ದಾಟಿದೆ. ಅವಳಿಗೆ 45. ಊಟಿಗೆ ಹೋಗೋದು... ಅಲ್ಲಿ ಮೋಹನನ ತಾಯಿ ತಂಗಮ್ಮನ ಹೆಸರಿನಲ್ಲಿ ಒಂದು ಮನೆಯಿದೆ. ಅದನ್ನು ಕೊಂಡುಕೊಳ್ಳೋಕೆ ಒಂದು ಪಾರ್ಟಿ ಮುಂಬೈಯಿಂದ ನಾಳೆ ಅಲ್ಲಿಗೆ ಬರುತ್ತಾರೆ. ಅದರ ವ್ಯವಹಾರ ಮಾತಾಡ್ಲಿಕ್ಕೆಂತ ನಾವು ಊಟಿಗೆ ಹೋಗ್ತಾ ಇರೋದು' ಮೇನೋನ್ ನುಡಿದ.

'ಮದರ್, ನೀವು ಊಟಿಗೆ ಹೋಗಿಲ್ವಾ? ಎಷ್ಟು ಮನೋಹರವಾದ ಸ್ಥಳ. ಮದರ್, ಹೋಗಿಲ್ವಾ?' ಮಿಸೆಸ್ ಮೇನೋನ್ ಕೇಳಿದಳು.

'ನಾನು ಊಟಿಗೆ ಹೋಗುವ ಸಂದರ್ಭ ಬಂದಿಲ್ಲ.' ಮದರ್ ಹೇಳಿದರು.

'ಒಂದು ಸಲ ನೀವು ನಮ್ಮ ಜೊತೆ ಊಟಿಗೆ ಬರಬೇಕು, ಏನಂತಿರಾ?' ಮೇನೋನ್ ಮದರಿನ ಕಣ್ಣುಗಳನ್ನೇ ದಿಟ್ಟಿಸುತ್ತಾ ಹೇಳಿದ.

ಮದರ್ ಸಣ್ಣದೊಂದು ಟವಲ್ ತೆಗೆದು ತಮ್ಮ ಬೆವರುತ್ತಿರುವ ಮುಖವನ್ನು ಒತ್ತಿ ಒರೆಸಿದರು.

'ಅದು ಹೇಗೆ? ನೀವು ಆ ಮನೆಯನ್ನು ಮಾರಲಿಕ್ಕೆ ಹೊರಟಿದ್ದೀರಾ?' ಮದರ್ ಮೇನೋನನ್ನು ಕೇಳಿದರು.

ಮೇನೋನ್ ಪುನಃ ಆಲಸ್ಯದಿಂದ ನಕ್ಕ.

'ನಿಮಗೆ ಟೀ ಬೇಕಾ, ಕಾಫಿ ಬೇಕಾ?' ಮದರ್ ಅವರನ್ನು ಕೇಳಿದರು.

'ನಮಗೆ ಚಹಾ ಎಂದರೆ ತುಂಬಾ ಇಷ್ಟ' ಮೇನೋನ್ ಹೇಳಿದ.

'ನಿಮಗೆ ಕಾಫಿ ತೋಟ ಇದೆಯಂತ ಯಾರೋ ಹೇಳುತ್ತಿದ್ದರು' ಮದರ್ ಹೇಳಿದರು.

'ಇದೆ ಇದೆ... ಅದರಿಂದಲೇ ಇರಬೇಕು ಕಾಫಿಯ ಮೇಲೆ ಒಂದು ರೀತಿಯ ಜುಗುಪ್ಸೆ' ಮೇನೋನ್ ಗಟ್ಟಿಯಾಗಿ ನಕ್ಕು ನುಡಿದ.

'ಅವೆಲ್ಲ ನಿಮ್ಮ ಮಗ ಮೋಹನನ ತಾಯಿಯ ಕಡೆಯಿಂದ ಬಂದಿದ್ದಲ್ವಾ?' ಮದರ್ ಪ್ರಶ್ನಿಸಿದರು.

'ಹೌದು, ತಂಗಂಗೆ ಅವಳ ಅಪ್ಪ ಮತ್ತು ತಾತ ಕೊಟ್ಟ ತೋಟ. ಅದನ್ನೆಲ್ಲ ನಡೆಸಿಕೊಂಡು ಹೋಗೋದಿಕ್ಕೆ ಬಹಳ ಕಷ್ಟವಾಗ್ತಿದೆ. ಅದರ ಅನುಭವ ನನಗಾಗುತ್ತಿದೆ. ಕೂಲಿ ಹೆಚ್ಚು ಮಾಡಬೇಕೂಂತ ಮುಷ್ಕರ ಹೂಡುವ ಕಾರ್ಮಿಕರು ನನಗೆ ನೆಮ್ಮದಿ ಕೊಡುತ್ತಿಲ್ಲ' ಮೇನೋನ್ ಹೇಳಿದ.

'ಆದರೆ, ಊಟಿಯ ಮನೆ ಮಾರುವಂತೆ ಕಾಫಿತೋಟವನ್ನು ಮಾರಬಾರದು' ಮದರ್ ಹೇಳಿದರು. ಮೇನೋನ್ ಮತ್ತು ಅವನ ಪತ್ನಿ ಪರಸ್ಪರ ಮುಖ ನೋಡಿಕೊಂಡರು. ಇಬ್ಬರ ಮುಖಗಳು ಬಿಳಿಚಿಕೊಂಡವು.

'ಅದೇಕೆ ಮದರ್ ನೀವು ಹಾಗೆ ಹೇಳ್ತಿರೋದು?